# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ಕಟ್ಟಡ ಜಯಂತಿ ನಗರ ವೃತ್ತ ಹೊರಮಾವು/ಕಲ್ಕೆರೆ ಮುಖ್ಯರಸ್ತೆ,**

**ಹೊರಮಾವು ಗ್ರಾಮ, ಬೆಂಗಳೂರು- 560113**

---

ಸಂಖ್ಯೆ.ಬಿಬಿಎಂಪಿ/ಸ.ಕಾ.ಅ/ಹೊಉವಿ/ಪಿಆರ್/28/2021-22 ದಿನಾಂಕ: 19.02.2022

*ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/ 2020-21 ದಿನಾಂಕ:21/09/2020 ಹಾಗೂ ನೋಡಲ್ ಅಧಿಕಾರಿ/ಕಂದಾಯ ಅಧಿಕಾರಿ (ಕೆ.ಆರ್.ಪುರ) ರವರು ದಿನಾಂಕ:-19.02.2022 ರಂದು ಹೊರಮಾವು ಉಪ-ವಿಭಾಗದ ರಾಮಮೂರ್ತಿನಗರ ವಾರ್ಡ್-26 ರ ಗೂಗಲ್ ಮೀಟಿಂಗ್ ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.*

**ಉಪಸ್ಥಿತರು:**

| ಕ್ರ.ಸಂ | ಹೆಸರು | ಹುದ್ದೆ | ಮೊ.ಸಂ |
|---|---|---|---|
| 1 | ಶ್ರೀ.ಬಸವ ಚಾರಿ | ನೋಡಲ್ ಅಧಿಕಾರಿ ವಾರ್ಡ್ ನಂ-26 | |
| 2 | ಶ್ರೀ. ಚಂದ್ರಶೇಖರ್ | ಸಹಾಯಕ ಕಾರ್ಯಪಾಲಕ ಅಭಿಯಂತರರು | 9844587466 |
| 3 | ಶ್ರೀ.ವಿಕ್ರಮ್ ಸಜ್ಜನ್ ಶೆಟ್ಟಿ | ಸಹಾಯಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿ ವಾರ್ಡ್ ನಂ-26 | 9739838297 |
| 4 | ಶ್ರೀ. ವಿಶ್ವನಾಥ್, | ಆರೋಗ್ಯ ಅಧಿಕಾರಿಗಳು, ವಾರ್ಡ್ ಸಂಖ್ಯೆ.26, | 9916609413 |
| 5 | ಶ್ರೀ. ಚಂದ್ರಕಲಾ | ಕಿರಿಯ ಆರೋಗ್ಯ ಪರಿವೀಕ್ಷಕರು | 9620101648 |
| 6 | ಶ್ರೀ. ಜಯರಾಮ್, | ಕಂದಾಯ ಅಧಿಕಾರಿ | 9663954692 |
| 7 | ಶ್ರೀ.ನಾರಯಣಸ್ವಾಮಿ | ಕಂದಾಯ ಅಧಿಕಾರಿ | 9880817752 |
| 8 | ಶ್ರೀ.ಚಿಟ್ಟಿಬಾಬು, ಸಹಾಯಕರು, | ಅರಣ್ಯ ಬಿ.ಬಿ.ಎಂ.ಪಿ | 9945430665 |
| | **ಸಾರ್ವಜನಿಕರು** | | |
| 9 | ಶ್ರೀಮತಿ ಸುಜಾತ ಶೆಟ್ಟಿ | ಎನ್.ಆರ.ಐ ಬಡಾವಣೆಯ | - |
| 10 | ಶ್ರೀ. ಮಲ್ಲಿಕಾರ್ಜುನ | ರಾಜ್‌ಕುಮಾರ ಬಡಾವಣೆ | - |
| 11 | ಶ್ರೀಮತಿ. ಜ್ಯೋತಿ ಚಂದ್ರ | ಪುಣ್ಯ ಭೂಮಿ ಬಡಾವಣೆ | - |
| 12 | ಶ್ರೀ. ಜೈಕುಮಾರ | ಕಾಮದೇನು ಬಡಾವಣೆ | - |
| 13 | ಶ್ರೀ. ಆನಂದ | ಪುಣ್ಯಭೂಮಿ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ | - |
| 14 | ಶ್ರೀ. ಕೋಚ್ಚು ಶಂಕರ್ | ಟ್ರೇನಿಟಿ ಎನ್‌ಕ್ಲೇವ್ | - |
| 15 | ಶ್ರೀ. ಪ್ರದೀಪ್ | ಗೊಲ್ಡನ್ ಎನ್‌ಕ್ಲೇವ್ | - |
| 16 | ಶ್ರೀ. ಸತೀಶ್ | ಬಂಜಾರ ಲೇಔಟ್ | - |

ಮಾನ್ಯ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಗೂಗಲ್ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಇತರೆ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಸುಸ್ವಾಗತ ಕೋರುತ್ತಾ, ಬಿಬಿಎಂಪಿ ವಾರ್ಡ್ ನಂ.26 ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಡಬ್ಲೂಎಸ್ಎಸ್‌ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ಸುಸ್ವಾಗತ ಕೋರಿ ಸಭೆಯನ್ನು ಆರಂಭಿಸಿದರು.

ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:-

ಶ್ರೀಮತಿ. ಸುಜಾತ ಶೆಟ್ಟಿ ಎನ್.ಆರ್.ಐ ಲೇಔಟ್:- ರವರು ಮಾತನಾಡುತ್ತಾ , ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ ವತಿಯಿಂದ ಕಾವೇರಿ ನೀರು ಸಂಪರ್ಕಕ್ಕಾಗಿ ಪೈಪುಗಳನ್ನು ಅಳವಡಿಸಲು ರಸ್ತೆಗಳನ್ನು ಅಗೆದಿದ್ದು, ಅರ್ದದಲ್ಲೇ ಕಾಮಗಾರಿಯನ್ನು ನಿಲ್ಲಿಸಿದ್ದು ಅಲ್ಲಿನ ಸ್ಥಳೀಯರಿಗೆ ಮನೆಯಿಂದ ಹೊರಗೆ ಬರಲು ಕಷ್ಟಕರವಾಗಿದ್ದು ಕೂಡಲೇ ಸರಿಪಡಿಸುವಂತೆ ಕೋರಿರುತ್ತಾರೆ.

ಕ್ರಮ:- ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ/ಹೊರಮಾವು ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

2) ನಮ್ಮ ರಸ್ತೆಯಲ್ಲಿ ದಿನನಿತ್ಯ ಬರುವ ಕಸದ ಬಂಡಿಯು ಇತ್ತೀಚಿನ ದಿನಗಳಲ್ಲಿ ಸರಿಯಾಗಿ ಬರುತ್ತಿಲ್ಲವೆಂದು ತಿಳಿಸಿದರು

ಕ್ರಮ:- ಕಿರಿಯ ಆರೋಗ್ಯ ಪರಿವೀಕ್ಷಕರು, ಅಗತ್ಯ ಕ್ರಮವಹಿಸುವಂತೆ ಸೂಚಿಸಿತು.

ಶ್ರೀ. ಮಲ್ಲಿಕಾರ್ಜುನ ರಾಜ್‌ಕುಮಾರ ಬಡಾವಣೆ :- ರವರು ಮಾತನಾಡಿ, 5ನೇ ಮುಖ್ಯ ರಸ್ತೆಯಲ್ಲಿ ಚರಂಡಿ ಸ್ಲಾಬ್‌ಗಳ ಮೇಲೆ ಕಸಗಳಿದ್ದು, ಕೂಡಲೇ ತೆಗಿಸಿಕೊಡುವಂತೆ ತಿಳಿಸಿದರು.

ಕ್ರಮ:- ಸಹಾಯಕ ಅಭಿಯಂತರರು, , ರವರು ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಶ್ರೀಮತಿ ಜ್ಯೋತಿ ಚಂದ್ರ ಪುಣ್ಯಭೂಮಿ ಬಡಾವಣೆ :- ರವರು ಮಾತನಾಡಿ, 7ನೇ ರಸ್ತೆಯಲ್ಲಿ ಚರಂಡಿ ಕಾಮಗಾರಿಯು ಇನ್ನು ನಡೆಯುತ್ತಿದ್ದು, ರಸ್ತೆಯು ಸಂಪೂರ್ಣ ಹಾಳಾಗಿದ್ದು ಕೂಡಲೇ ಜಲ್ಲಿಯನ್ನು ಹಾಕಿಸಿಕೊಡುವಂತೆ ಕೋರಿರುತ್ತಾರೆ.

ಕ್ರಮ:- ಸಹಾಯಕ ಅಭಿಯಂತರರು, ರವರು ಗುತ್ತಿಗೆದಾರರಿಗೆ ಈ ಕೂಡಲೇ ತಿಳಿಸುವಂತೆ ಸೂಚಿಸಿತು.

ಜೈಕುಮಾರ್ ಕಾಮದೇನು ಬಡಾವಣೆ :-ರವರು ಮಾತನಾಡಿ ಚರಂಡಿಯ ಹೂಳನ್ನು ಹೊರತೆಗೆದು ಸುಮಾರು ದಿನಗಳಾಗಿದ್ದು, ಕೂಡಲೇ ವಾರ್ಡ್‌ನ ಟ್ರಾಕ್ಟರ್‌ನ್ನು ಕಳುಹಿಸುವಂತೆ ಸೂಚಿಸಿದರು.

ಕ್ರಮ:- ಸಹಾಯಕ ಅಭಿಯಂತರರು, ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಶಂಕರ್ ಟ್ರೀನಿಟಿ ಎನ್‌ಕ್ಲೇವ್ ಅಸೋಸಿಯೇಷನ್:-ರವರು ಮಾತನಾಡಿ ವಾರ್ಡ್ ಸಂಖ್ಯೆ 26ರ ಟ್ರೀನಿಟಿ ಎನ್‌ಕ್ಲೇವ್ ಬಡಾವಣೆಯ ಉಳಿದ ಬಾಗಗಳಿಗೆ ರಸ್ತೆಯನ್ನು ಮಾಡಲು ಹಾಗೂ ಚರಂಡಿ ಕಾಮಗಾರಿಯ ಕೆಲಸವನ್ನು ಬೇಗನೇ ಶುರುಮಾಡಿಕೊಡುವಂತೆ ತಿಳಿಸಿದರು.

ಕ್ರಮ:- ಸಹಾಯಕ ಅಭಿಯಂತರರು, ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಗೂಗಲ್ ಮೀಟಿಂಗ್ ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಸ.ಕಾ.ಅ ಹೊರಮಾವು ಉಪ-ವಿಭಾಗ ರವರು ಗೂಗಲ್ ಸಭೆಯಲ್ಲಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ದಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಿದರು.

R. Basavalam 19.2.2022

ನೋಡೆಲ್ ಅಧಿಕಾರಿ ವಾರ್ಡ್ ನಂ.26

ಹಾಗೂ ಕಂದಾಯ ಅಧಿಕಾರಿ

ಕೆ.ಆರ್.ಪುರ ವಿಬಾಗ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರು

ಹೊರಮಾವು ವಾರ್ಡ್‌ನಂ.26

ಬಿ.ಬಿ.ಎಂ.ಪಿ